# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 964

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ,

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 24.02.2023

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ.</td>
<td>ರಾಜ್ಯದಲ್ಲಿ ಸಾರಿಗೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿದೆಯೇ; ಇದ್ದಲ್ಲಿ ಎಷ್ಟು ಕೊರತೆಯಿದೆ; ಸಿಬ್ಬಂದಿ ಕೊರತೆಯಿಂದ ಆದಾಯ ಸಂಗ್ರಹಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ಕ್ರಮಗಳೇನು; (ವಿವರ ನೀಡುವುದು)</td>
<td>
ಹೌದು, ಸಿಬ್ಬಂದಿ ಕೊರತೆಯಿದೆ.<br><br>
ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳ ಮಾಹಿತಿ ಈ ಕೆಳಕಂಡಂತಿದೆ:
<table>
<tr><th>ನಿಗಮ/ ಸಂಸ್ಥೆ</th><th>ಖಾಲಿ ಹುದ್ದೆಗಳು</th></tr>
<tr><td>ಕ.ರಾ.ರ.ಸಾ.ನಿಗಮ</td><td>5744</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>4630</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>1816</td></tr>
<tr><td>ಕ.ಕ.ರ.ಸಾ.ನಿಗಮ</td><td>2853</td></tr>
<tr><td>ಒಟ್ಟು</td><td>15043</td></tr>
</table>
ಕ.ರಾ.ರ.ಸಾ. ನಿಗಮ:-<br><br>
ನಿಗಮದಲ್ಲಿ ಚಾಲನಾ ಸಿಬ್ಬಂದಿಗಳ ಕೊರತೆಯಿಂದಾಗಿ ಹೆಚ್ಚಿನ ಅನುಸೂಚಿಗಳನ್ನು ಕಾರ್ಯಾಚರಿಸಲು ಹಾಗೂ ಹೆಚ್ಚುವರಿ ಆದಾಯ ಗಳಿಸಲು ತೊಡಕುಂಟಾಗಿರುತ್ತದೆ.<br><br>
ಬೆಂ.ಮ.ಸಾ.ಸಂಸ್ಥೆ/ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮ:-<br><br>
ಸಿಬ್ಬಂದಿಗಳ ಕೊರತೆ ಇದ್ದಾಗ್ಯೂ ಸಹ ಪ್ರಸ್ತುತ ಸಂಸ್ಥೆಯಲ್ಲಿ ಲಭ್ಯವಿರುವ ಸಿಬ್ಬಂದಿ ಬಲವನ್ನು ಉಪಯೋಗಿಸಿಕೊಂಡು ಆದಾಯ ಸಂಗ್ರಹಿಸಲು ಕ್ರಮವಹಿಸಲಾಗುತ್ತಿದೆ.<br><br>
ಸಿಬ್ಬಂದಿ ಕೊರತೆಯನ್ನು ನೀಗಿಸುವ ಸಲುವಾಗಿ ನೇರ ನೇಮಕಾತಿ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮದ ವಿವರ ಈ ಕೆಳಕಂಡಂತಿರುತ್ತದೆ:<br><br>
ಕ.ರಾ.ರ.ಸಾ. ನಿಗಮ:-<br><br>
726-ತಾಂತ್ರಿಕ ಸಹಾಯಕ, 200-ಭದ್ರತಾ ರಕ್ಷಕ, 1200-ಚಾಲಕ ಮತ್ತು 2545-ಚಾಲಕ-ಕಂ-ನಿರ್ವಾಹಕ ಹುದ್ದೆಗಳ ನೇಮಕಾತಿಗೆ ಪ್ರಕ್ರಿಯೆಗಳಿಗೆ ಚಾಲನೆ ನೀಡಲು ಕ್ರಮವಹಿಸಲಾಗುತ್ತಿದೆ.<br><br>
ಆದಾಗ್ಯೂ, ನಿಗಮದಲ್ಲಿ ಚಾಲಕರ ತೀವ್ರ ಕೊರತೆ ಇರುವ ಈ ಕೆಳಕಂಡ ವಿಭಾಗಗಳಿಗೆ ಹೊರಗುತ್ತಿಗೆ ಮೂಲಕ ಚಾಲಕರನ್ನು ನಿಯೋಜಿಸಲು ಕ್ರಮ ವಹಿಸಲಾಗಿದೆ:
<table>
<tr><th>ಕ್ರ. ಸಂ.</th><th>ವಿಭಾಗ</th><th>ನಿಯೋಜಿಸಿರುವ ಸಂಖ್ಯೆ</th></tr>
<tr><td>1</td><td>ಮಂಗಳೂರು</td><td>150</td></tr>
</table>
</td>
</tr>
</table>

| | | |
|---|---|---|
| 2 | ಪುತ್ತೂರು | 100 |
| 3 | ಚಾಮರಾಜನಗರ | 50 |
| 4 | ರಾಮನಗರ | 50 |
| | ಒಟ್ಟು | **350** |

**ಕ.ಕ.ರ.ಸಾ. ನಿಗಮ:-**

925-ಚಾಲಕ, 694-ಚಾಲಕ-ಕಂ-ನಿರ್ವಾಹಕ, 16-ಸಹಾಯಕ ಲೆಕ್ಕಿಗ ಮತ್ತು 300-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಮತ್ತು 59 ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳಲು ಹಾಗೂ ಬಾಕಿ 36 ಹಿಂಬಾಕಿ ಹುದ್ದೆಗಳ ನೇಮಕಾತಿಗೂ ಅನುಮತಿ ನೀಡಲಾಗಿದ್ದು, ಜಾಹೀರಾತು ಹೊರಡಿಸಲಾಗಿದೆ.

1619 ಚಾಲನಾ ಸಿಬ್ಬಂದಿಗಳ ನೇಮಕಾತಿಗಾಗಿ ಅರ್ಜಿ ಸಲ್ಲಿಸಿದ ಎಲ್ಲಾ 38622 ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನಾ ಕಾರ್ಯ ಪ್ರಸ್ತುತ ಚಾಲನೆಯಲ್ಲಿರುತ್ತದೆ. ಸದರಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳಲು ಸುಮಾರು 09 ತಿಂಗಳುಗಳಿಂದ 01 ವರ್ಷದವರೆಗೆ ಸಮಯಾವಕಾಶ ಬೇಕಾಗಿದ್ದು, ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಿಬ್ಬಂದಿಗಳನ್ನು ಅವಶ್ಯಕ ಇರುವ ಎಲ್ಲಾ ವಿಭಾಗದ ಘಟಕಗಳಿಗೆ ಹಂಚಿಕೆ ಮಾಡಲಾಗುವುದು.

ಮುಂದುವರೆದು, ನಿಗಮದ ವಯೋನಿವೃತ್ತಿ ಹೊಂದಿದ ಚಾಲನಾ ಸಿಬ್ಬಂದಿಗಳ ಸೇವೆಯನ್ನು (ಚಾಲಕ ಮತ್ತು ನಿರ್ವಾಹಕ) ತಾತ್ಕಾಲಿಕವಾಗಿ ಬಳಸಲಾಗುತ್ತಿದ್ದು, ಪ್ರಸ್ತುತ 112 ನಿವೃತ್ತ ಚಾಲನಾ ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳಲಾಗಿದೆ.

ಆ. ರಸ್ತೆ ಸಾರಿಗೆ ನಿಗಮಗಳ ಸಿಬ್ಬಂದಿ ಈ ಹಿಂದೆ ಮುಷ್ಕರದಲ್ಲಿ ತೊಡಗಿದ್ದು, ಅವರಲ್ಲಿ ಕೆಲವರನ್ನು ಸೇವೆಯಿಂದ ವಜಾಗೊಳಿಸಿದ್ದು, ಪ್ರಸ್ತುತ ಎಷ್ಟು ಜನರನ್ನು ಪುನಃ ಸೇವೆಗೆ ಮರು ನೇಮಕ ಮಾಡಲಾಗಿದೆ; ಮರು ನೇಮಕಾತಿಗೆ ಎಷ್ಟು ಬಾಕಿಯಿದೆ; ಅವರನ್ನು ಯಾವಾಗ ಮರು ನೇಮಕ ಮಾಡಲಾಗುವುದು; (ಸಾರಿಗೆ ಸಂಸ್ಥೆ ನಿಗಮವಾರು ವಿವರ ನೀಡುವುದು)

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಮುಷ್ಕರದಲ್ಲಿ ತೊಡಗಿದ್ದು, ಸಿಬ್ಬಂದಿಗಳನ್ನು ಸೇವೆಯಿಂದ ವಜಾಗೊಳಿಸಿದ ವಿವರ ಈ ಕೆಳಕಂಡಂತಿದೆ.

**ಕ.ರಾ.ರ.ಸಾ.ನಿಗಮ**

ಮುಷ್ಕರದ ಕಾರಣದಿಂದ ಯಾವುದೇ ನೌಕರರನ್ನು ವಜಾಗೊಳಿಸಿರುವುದಿಲ್ಲ. ಆದರೆ ಮುಷ್ಕರದ ಅವಧಿಯಲ್ಲಿ ಅನ್ಯ ಕಾರಣಗಳ ಮೇಲೆ ದಾಖಲಾಗಿದ್ದ ಶಿಸ್ತು ಪ್ರಕರಣಗಳಲ್ಲಿ ಒಟ್ಟು 74 ಸಿಬ್ಬಂದಿಗಳನ್ನು ವಜಾಗೊಳಿಸಿದ್ದು, ವಜಾಗೊಂಡ ಸಿಬ್ಬಂದಿಗಳು ವಜಾ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಪ್ರಾಧಿಕಾರಸ್ಥರಿಗೆ/ಸ್ವಯಂ ಪರಿಶೀಲನಾ ಪ್ರಾಧಿಕಾರಸ್ಥರಿಗೆ ಮೇಲ್ಮನವಿ/ಅರ್ಜಿಗಳನ್ನು ಸಲ್ಲಿಸಿದ ಪ್ರಕರಣಗಳಲ್ಲಿ ನಿಯಮಾವಳಿಗಳನ್ವಯ ಮತ್ತು ಪ್ರಕರಣಗಳ ಅರ್ಹತೆಯ ಆಧಾರದ ಮೇಲೆ (on merits of the case) ಅರ್ಹ ಪ್ರಕರಣಗಳಲ್ಲಿ ಈಗಾಗಲೇ 12 ಸಿಬ್ಬಂದಿಗಳನ್ನು ಪುನರ್ ನೇಮಕ ಮಾಡಲಾಗಿದೆ. ಉಳಿದ 62 ನೌಕರರು ಯಾವುದೇ ಮೇಲ್ಮನವಿಯನ್ನು ಪ್ರಾಧಿಕಾರಸ್ಥರಿಗೆ ಸಲ್ಲಿಸದೇ ಇರುವುದರಿಂದ ಅಂತಹ ನೌಕರರುಗಳನ್ನು ಪುನರ್ ನೇಮಕ ಮಾಡಿರುವುದಿಲ್ಲ.

**ಬೆಂ.ಮ.ಸಾ.ಸಂಸ್ಥೆ:**

ಸಾರಿಗೆ ನೌಕರರ ಮುಷ್ಕರದ ಅವಧಿಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಒಟ್ಟು 1354 ಸಿಬ್ಬಂದಿಗಳನ್ನು ಸೇವೆಯಿಂದ ವಜಾಗೊಳಿಸಲಾಗಿರುತ್ತದೆ/ತೆಗೆದುಹಾಕಲಾಗಿರುತ್ತದೆ. ಆ ಪೈಕಿ 764 ಸಿಬ್ಬಂದಿಗಳನ್ನು ಈಗಾಗಲೇ ಪುನರ್ ನೇಮಕ ಮಾಡಿಕೊಳ್ಳಲಾಗಿದ್ದು, 479 ಪ್ರಕರಣಗಳು ಮಾನ್ಯ ನ್ಯಾಯಾಲಯದಲ್ಲಿ ಬಾಕಿ

| | | |
|---|---|---|
| | | ಉಳಿದಿರುತ್ತವೆ. 111 ಸಿಬ್ಬಂದಿಗಳು ಮರುನೇಮಕ ಕೋರಿ ಮನವಿ ಸಲ್ಲಿಸಿರುವುದಿಲ್ಲ.<br><br>ಪ್ರಸ್ತುತ ಮಾನ್ಯ ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ 479 ಪ್ರಕರಣಗಳ ಪೈಕಿ ಮಾನ್ಯ ಉಚ್ಛ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ 163 ಸಿಬ್ಬಂದಿಗಳನ್ನು ಕೆಲಸಕ್ಕೆ ತೆಗದುಕೊಳ್ಳುವ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ.<br><br>**ವಾ.ಕ.ರ.ಸಾ.ಸಂಸ್ಥೆ**<br><br>ಒಟ್ಟು 336 ಸಿಬ್ಬಂದಿಗಳನ್ನು ವಜಾ, ಸೇವೆಯಿಂದ ಬಿಡುಗಡೆ ಹಾಗೂ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಮುಂದುವರೆದಂತೆ ಈ ರೀತಿಯಲ್ಲಿ ವಜಾ, ಸೇವೆಯಿಂದ ಬಿಡುಗಡೆ ಹಾಗೂ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾದ ಸಿಬ್ಬಂದಿಗಳಲ್ಲಿ 309 ಸಿಬ್ಬಂದಿಗಳು ಮೇಲ್ಮನವಿ ಸಲ್ಲಿಸಿದ್ದು, ಇದರಲ್ಲಿ 291 ಮೇಲ್ಮನವಿ ಪ್ರಕರಣಗಳಲ್ಲಿ ನಿಯಮಾವಳಿಗಳನ್ವಯ ಮತ್ತು ಪ್ರಕರಣದ ಅರ್ಹತೆಯ ಆಧಾರದ ಮೇಲೆ (on merits of the case) ಈಗಾಗಲೇ ಸದರಿ ಸಿಬ್ಬಂದಿಗಳನ್ನು ಸೇವೆಯಲ್ಲಿ ಮರುನೇಮಕಗೊಳಿಸಲಾಗಿದೆ. ಪ್ರತಿಭಟನೆಯಲ್ಲಿ ಪಾಲ್ಗೊಂಡು, ಕರ್ತವ್ಯ ನಿರತ ಚಾಲಕನ ಸಾವಿಗೆ ಕಾರಣರಾಗಿರುವ ಹಾಗೂ ಅನ್ಯ ಕಾರಣಗಳ ಈ ಹಿಂದಿನ ಪ್ರಕರಣಗಳಲ್ಲಿ ವಿಚಾರಣೆ ಕೈಗೊಂಡು ವಜಾಗೊಳಿಸಿದ ಸಿಬ್ಬಂದಿಗಳಿಗೆ ಸಂಬಂಧಿಸಿದ ಮೇಲ್ಮನವಿಗಳನ್ನು ಪ್ರಕರಣದ ಗಂಭೀರತೆಯನುಸಾರ ಪರಿಗಣಿಸಿರುವುದಿಲ್ಲ. ಉಳಿದ 27 ಸಿಬ್ಬಂದಿಗಳು ಮೇಲ್ಮನವಿಗಳನ್ನು ಸಲ್ಲಿಸಿರುವುದಿಲ್ಲ.<br><br>**ಕ.ಕ.ರ.ಸಾ.ಸಂಸ್ಥೆ**<br><br>ಮುಷ್ಕರದ ಅವಧಿಯಲ್ಲಿ ವಜಾಗೊಂಡ ಒಟ್ಟು 60 ಖಾಯಂ ನೌಕರರ ಪೈಕಿ, 45 ನೌಕರರು ಮೇಲ್ಮನವಿಯನ್ನು ಸಲ್ಲಿಸಿದ್ದು, ಆ ಪೈಕಿ 07 ನೌಕರರನ್ನು ಮರುನೇಮಕ ಮಾಡಿಕೊಳ್ಳಲಾಗಿದ್ದು, ಉಳಿದ 38 ನೌಕರರು ಸಲ್ಲಿಸಿದ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆ. ಮಿಕ್ಕುಳಿದ 15 ನೌಕರರು ಮೇಲ್ಮನವಿ ಯನ್ನು ಸಲ್ಲಿಸಿರುವುದಿಲ್ಲ. ಸರ್ಕಾರದ ನಿರ್ದೇಶನದಂತೆ ವಜಾಗೊಂಡ ನೌಕರರ ಪೈಕಿ ಒಟ್ಟು 35 ನೌಕರರು ವಿವಿಧ ಕಾರ್ಮಿಕ ನ್ಯಾಯಾಲಯದಲ್ಲಿ ವಜಾ ಆದೇಶ ವಿರುದ್ಧ ದಾವೆ ಹೂಡಿದ್ದು, ಅವುಗಳ ಪೈಕಿ ಮಾನ್ಯ ಲೋಕ ಅದಾಲತನಲ್ಲಿ ರಾಜಿ ಸಂಧಾನದ ಮೂಲಕ ಒಟ್ಟು 27 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿರುತ್ತದೆ. ಇನ್ನೂ 08 ಪ್ರಕರಣಗಳು ಇತ್ಯರ್ಥಕ್ಕೆ ಮಾನ್ಯ ಕಾರ್ಮಿಕ ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ. |
| ಇ. | ರಸ್ತೆ ಸಾರಿಗೆ ನಿಗಮಗಳ ಸಿಬ್ಬಂದಿಗಳಿಗೆ ಯಾವ ವೇತನ ಶ್ರೇಣಿಯ ಆಧಾರದಲ್ಲಿ ವೇತನ ನೀಡಲಾಗುತ್ತಿದೆ; (ವೃಂದ ಡಿ ಯಿಂದ ಎ ವರೆಗೆ ಹೊರಗುತ್ತಿಗೆ ಸಹಿತ ಎಲ್ಲಾ ಸಿಬ್ಬಂದಿ ಮತ್ತು ಅಧಿಕಾರಿಗಳ ವಿವರವನ್ನು ಸಾರಿಗೆ ನಿಗಮವಾರು ವಿವರ ನೀಡುವುದು) | ನಾಲ್ಕೂ ಸಾರಿಗೆ ನಿಗಮಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸುತ್ತೋಲೆ ಸಂಖ್ಯೆ 10/2016 ರ ಮೂಲ ವೇತನ ಪರಿಷ್ಕರಣೆ ಸುತ್ತೋಲೆಯಂತೆ ವೇತನ ನೀಡಲಾಗುತ್ತಿದ್ದು, ವಿವಿಧ ಪದವೃಂದಗಳಿಗೆ ಪ್ರತ್ಯೇಕ ವೇತನ ಶ್ರೇಣಿಯಿದ್ದು, ವೇತನ ಶ್ರೇಣಿಗಳ ವಿವರವನ್ನು '**ಅನುಬಂಧ-ಅ**'ರಲ್ಲಿ ನೀಡಲಾಗಿದೆ. |
| ಈ. | ಕೋವಿಡೋತ್ತರ ಅವಧಿಯಲ್ಲಿ ಸಾರಿಗೆ ನಿಗಮಗಳ ಆರ್ಥಿಕ ಸುಧಾರಣೆಗೆ ಕೈಗೊಂಡ ಕ್ರಮಗಳೇನು; ಸಾರಿಗೆ ನಿಗಮಗಳನ್ನು ಆರ್ಥಿಕವಾಗಿ ಸಶಸ್ತಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಬೇಡಿಕೆಯಿರುವ ಮತ್ತು ಲಾಭದಾಯಕ ಮಾರ್ಗಗಳಲ್ಲಿ | ಸಾರಿಗೆ ಸಂಸ್ಥೆಗಳ ನಷ್ಟವನ್ನು ಸರಿದೂಗಿಸಲು ಈ ಕೆಳಕಂಡಂತೆ ವಿಶೇಷ ಆರ್ಥಿಕ ಸಹಾಯವನ್ನು ಒದಗಿಸಲಾಗಿದೆ: |

ಸಾರಿಗೆ ನಿಗಮದ ಬಸ್ಸುಗಳು ಸಂಚರಿಸುವಂತಾಗಲು ಸರ್ಕಾರದ ಕ್ರಮಗಳೇನು; ಈ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣಗಳಿದೆಯೇ; (ಸಾರಿಗೆ ನಿಗಮವಾರು ವಿವರ ನೀಡುವುದು)

(ರೂ. ಕೋಟಿಗಳಲ್ಲಿ)

| ಕ್ರ.ಸಂ. | ವಿಶೇಷ ಸಹಾಯಧನದ ವಿವರ | 2020-21 | 2021-22 | 2022-23 (ಆಗಸ್ಟ್ - 22ರ ಅಂತ್ಯದ ವರೆಗೆ) |
|---|---|---|---|---|
| **1. ನೌಕರರ ವೇತನ ಪಾವತಿಗಾಗಿ** | | | | |
| | ಕ.ರಾ.ರ.ಸಾ.ನಿಗಮ | 563.55 | 235.86 | - |
| | ಬೆಂ.ಮ.ಸಾ.ಸಂಸ್ಥೆ | 690.55 | 582.05 | 35.00 |
| | ವಾ.ಕ.ಐ.ಸಾ.ಸಂಸ್ಥೆ | 369.41 | 230.17 | - |
| | ಕ.ಕ.ರ.ಸಾ.ನಿಗಮ | 329.89 | 134.14 | - |
| **2. ಇಂಧನ ವೆಚ್ಚ ಹಾಗೂ ಭವಿಷ್ಯನಿಧಿ ಹಿಂಬಾಕಿ ಪಾವತಿಗಾಗಿ** | | | | |
| | ಕ.ರಾ.ರ.ಸಾ.ನಿಗಮ | - | 200.00 | 330.00 |
| | ಬೆಂ.ಮ.ಸಾ.ಸಂಸ್ಥೆ | 308.00 | 400.00 | 420.00 |
| | ವಾ.ಕ.ರ.ಸಾ.ಸಂಸ್ಥೆ | - | - | 320.00 |
| | ಕ.ಕ.ರ.ಸಾ.ನಿಗಮ | - | - | 130.00 |

**3. ಮೋಟಾರು ವಾಹನ ತೆರಿಗೆ ಮನ್ನಾ**

ನಾಲ್ಕೂ ಸಾರಿಗೆ ಸಂಸ್ಥೆಗಳು ಸರ್ಕಾರಕ್ಕೆ 2020-21ನೇ ಸಾಲಿನವರೆಗೆ ಹಾಗೂ 2021-22ನೇ ಸಾಲಿನಲ್ಲಿ ಪಾವತಿಸಬೇಕಾಗಿದ್ದ ಮೋಟಾರು ವಾಹನ ತೆರಿಗೆ ಮೊತ್ತಕ್ಕೆ ವಿನಾಯಿತಿ ನೀಡಲಾಗಿದೆ. ಅಲ್ಲದೇ, 2022-23ನೇ ಸಾಲಿನ ಮೋಟಾರು ವಾಹನ ತೆರಿಗೆ ಪಾವತಿಯಿಂದ ಬೆಂ.ಮ.ಸಾ.ಸಂಸ್ಥೆ ಮತ್ತು ವಾ.ಕ.ರ.ಸಾ.ಸಂಸ್ಥೆಗಳಿಗೆ ವಿನಾಯಿತಿ ನೀಡಲು ಕ್ರಮ ವಹಿಸಲಾಗುತ್ತಿದೆ ಹಾಗೂ ಕ.ರಾ.ರ.ಸಾ.ನಿಗಮ ಮತ್ತು ಕ.ಕ.ರ.ಸಾ.ನಿಗಮಗಳಿಗೆ ತೆರಿಗೆಯನ್ನು ಉಳಿಸಿಕೊಳ್ಳಲು ಅನುಮೋದನೆ ನೀಡಲಾಗಿದೆ.

ಮುಂದುವರೆದು, 2000-01ರಿಂದ ಬೆಂ.ಮ.ಸಾ.ಸಂಸ್ಥೆ, ವಾ.ಕ.ರ.ಸಾ.ಸಂಸ್ಥೆ ಹಾಗೂ ಕ.ಕ.ರ.ಸಾ.ನಿಗಮಗಳು ಸರ್ಕಾರಕ್ಕೆ ಪಾವತಿಸಬೇಕಾಗಿದ್ದು, ಆದರೆ ಬಾಕಿ ಉಳಿಸಿಕೊಳ್ಳಲಾಗಿದ್ದ ಮೋಟಾರು ವಾಹನ ತೆರಿಗೆ ಮೊತ್ತ ಕ್ರಮವಾಗಿ ರೂ.259.47 ಕೋಟಿ, ರೂ.327.06 ಕೋಟಿ ಮತ್ತು ರೂ.392.33 ಕೋಟಿಗಳನ್ನು ಸರ್ಕಾರದ ಷೇರು ಬಂಡವಾಳವಾಗಿ ಪರಿವರ್ತಿಸಲಾಗಿದೆ.

ಮುಂದುವರೆದು, ಸಾರಿಗೆ ಸಂಸ್ಥೆಗಳ ನಷ್ಟವನ್ನು ಸರಿದೂಗಿಸಲು ಕೈಗೊಂಡ ಕ್ರಮಗಳ ವಿವರಗಳನ್ನು <u>ಅನುಬಂಧ-ಆರಲ್ಲಿ</u> ನೀಡಲಾಗಿದೆ.

ಬೇಡಿಕೆಯಿರುವ ಮತ್ತು ಲಾಭದಾಯಕ ಮಾರ್ಗಗಳಲ್ಲಿ ಸಾರಿಗೆ ನಿಗಮದ ಬಸ್ಸುಗಳು ಸಂಚರಿಸುವಂತಾಗಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ:

| | |
|---|---|
| | **ಕ.ರಾ.ರ.ಸಾ.ನಿಗಮ**<br><br>ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಮಂಗಳೂರು ಪ್ರಾಧಿಕಾರವು ದಿನಾಂಕ 31.10.2017ರ ನಿರ್ಣಯದಲ್ಲಿ ಕ.ರಾ.ರ.ಸಾ.ನಿಗಮದ 08 ಅರ್ಜಿಗಳಿಗೆ 07 ಸುತ್ತುಗಳನ್ನು ಮಂಜೂರಾತಿ ಮಾಡಲಾಗಿರುತ್ತದೆ. ಸದರಿ ಮಂಜೂರಾತಿಯನ್ನು ಖಾಸಗಿ ಪ್ರವರ್ತಕರು ಮಾನ್ಯ ಕರ್ನಾಟಕ ರಾಜ್ಯ ಸಾರಿಗೆ ಮೇಲ್ಮನವಿ ನ್ಯಾಯಾಧಿಕರಣ ಬೆಂಗಳೂರು, ಆರ್.ಪಿ.ಸಂಖ್ಯೆ 164/2017 ಮತ್ತು ಇತರೆ ಪ್ರಕರಣಗಳಲ್ಲಿ ಪ್ರಶ್ನಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ 05.02.2018 ರಂದು ಸದರಿ ಮಂಜೂರಾತಿಯ ನಿರ್ಣಯವನ್ನು ಬದಿಗೊತ್ತಿ ಪ್ರಕರಣವನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಮಂಗಳೂರು ಪ್ರಾಧಿಕಾರಕ್ಕೆ ಮರುಪರಿಶೀಲಿಸಲು ಆದೇಶಿಸಿರುತ್ತದೆ. ಅದರನ್ವಯ ಪ್ರಾಧಿಕಾರವು ಪ್ರಕರಣವನ್ನು ಮರುಪರಿಗಣಿಸಿ ದಿನಾಂಕ:13.0[illegible].2022ರ ನಿರ್ಣಯದಲ್ಲಿ ಈ ಹಿಂದೆ ನಿಗಮಕ್ಕೆ ನೀಡಿದ್ದ 08 ಅರ್ಜಿಗಳಲ್ಲಿ 07 ಸುತ್ತುಗಳ ಬದಲಿಗೆ 03 ಸುತ್ತುಗಳನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ನಿರ್ಣಯವನ್ನು ನಿಗಮವು ಅಪೀಲು ಸಂಖ್ಯೆ 157/2022, 158/2022,159/2022,160/2022,161/2022,162/2022,163/2022,164/2022 ಅನ್ನು ಮಾನ್ಯ ಕರ್ನಾಟಕ ರಾಜ್ಯ ಸಾರಿಗೆ ಮೇಲ್ಮನವಿ ನ್ಯಾಯಾಧಿಕರಣ, ಬೆಂಗಳೂರು ರಲ್ಲಿ ಪ್ರಶ್ನಿಸಿ, ಪ್ರಕರಣವು ವಿಚಾರಣೆಗೆ ಬಾಕಿಯಿರುತ್ತದೆ.<br><br>**ಬೆಂ.ಮ.ಸಾ.ಸಂಸ್ಥೆ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮ:-**<br><br>ಸಂಸ್ಥೆಗಳ ವ್ಯಾಪ್ತಿಯಲ್ಲಿ ಬೇಡಿಕೆಯಿರುವ ಮತ್ತು ಲಾಭದಾಯಕ ಮಾರ್ಗಗಳಲ್ಲಿ ಸಾರ್ವಜನಿಕ ಬೇಡಿಕೆ/ಅವಶ್ಯಕತೆಗೆ ಅನುಗುಣವಾಗಿ ಹೆಚ್ಚುವರಿ ಸಾರಿಗೆ ಸೌಲಭ್ಯ ಒದಗಿಸಲಾಗುತ್ತಿದ್ದು, ಈ ಕುರಿತು ನ್ಯಾಯಾಲಯದಲ್ಲಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| ಸಾರಿಗೆ ನಿಗಮದ ಬಸ್ಸುಗಳಲ್ಲಿ ಹಿರಿಯ ನಾಗರೀಕರು, ವಿದ್ಯಾರ್ಥಿಗಳು, ದಿವ್ಯಾಂಗರು ಇತ್ಯಾದಿ ರಿಯಾಯಿತಿ ಪಾಸುಗಳಿಂದ ನಿಗಮಗಳಿಗೆ ಆಗುವ ಕಂದಾಯ ನಷ್ಟವನ್ನು ಸರಿದೂಗಿಸಲು ಸರ್ಕಾರ ಏನು ಕ್ರಮವಹಿಸಿದೆ? (ಸಾರಿಗೆ ನಿಗಮವಾರು ವಿವರ ನೀಡುವುದು) | ಸಾರಿಗೆ ಸಂಸ್ಥೆಗಳು ಸಾಮಾಜಿಕ ಹೊಣೆಗಾರಿಕೆಯಡಿ ವಿದ್ಯಾರ್ಥಿ ಉಚಿತ / ರಿಯಾಯಿತಿ ಬಸ್ ಪಾಸ್ ವೆಚ್ಚದ ಮರುಪಾವತಿಗಾಗಿ ಆಯಾ ಸಾರಿಗೆ ಸಂಸ್ಥೆಗಳ ಲೆಕ್ಕ ಪ್ರತಿ ವರ್ಷ ಆಯವ್ಯಯದಲ್ಲಿ ಶೀರ್ಷಿಕೆಗಳಡಿ ಅನುದಾನ ನಿಗದಿಪಡಿಸಿ, ಬಿಡುಗಡೆಗೊಳಿಸಲಾಗುತ್ತಿದೆ.<br><br>ಮುಂದುವರೆದು, ವಿಕಲಚೇತನರ ರಿಯಾಯಿತಿ ಪಾಸುಗಳು, ಅಂಧರ ಉಚಿತ ಪಾಸುಗಳು, ಸ್ವಾತಂತ್ರ್ಯ ಹೋರಾಟಗಾರರು, ಸ್ವಾತಂತ್ರ್ಯ ಹೋರಾಟಗಾರರ ಪತ್ನಿ / ವಿಧವಾ ಪತ್ನಿಯರ ಪಾಸು, ಹಿರಿಯ ನಾಗರಿಕರ ಶೇ.25ರಷ್ಟು ಪ್ರಯಾಣದರ ರಿಯಾಯಿತಿ, ಎಂಡೋಸಲ್ಫಾನ್ ಪೀಡಿತರ ಪಾಸು, ಗೋವಾ ವಿಮೋಚನಾ ಚಳುವಳಿಗಾರರ ಪಾಸು, ಹುತಾತ್ಮ ಯೋಧರ ಅವಲಂಬಿತರ ಪಾಸುಗಳನ್ನು ವಿತರಣೆ ಮಾಡುತ್ತಿದ್ದು, ಸದರಿ ಪಾಸುಗಳಿಗೆ ತಗಲುವ ವೆಚ್ಚವನ್ನು ಪ್ರತಿ ವರ್ಷ ಆಯವ್ಯಯದಲ್ಲಿ ಅನುದಾನ ನಿಗದಿಪಡಿಸಿ, ಸಾರಿಗೆ ಸಂಸ್ಥೆವಾರು ಶೇಕಡವಾರು ಅನುಪಾತದಲ್ಲಿ ಅನುದಾನ ಬಿಡುಗಡೆಗೊಳಿಸಲಾಗುತ್ತಿದೆ. |

ಸಂಖ್ಯೆ: ಟಿಡಿ 56 ಟಿಸಿಕ್ಯೂ 2023

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು